# ಮಾನವೀಯತೆಯ ರಾಯಭಾರಿ



ಪ್ರವೀಣ ಕುಲಕರ್ಣಿ

ಸ್ಪೇನ್‌ನ ಟೆನಿಸ್ ಆಟಗಾರ ರಫೆಲ್ ನಡಾಲ್ ಅವರು ಕಳೆದ ವಾರ ಮೆಲ್ಬರ್ನ್‌ನಲ್ಲಿ ದಾಖಲೆಯ 21ನೇ ಗ್ರ್ಯಾನ್ ಸ್ಲಾಮ್ ಟ್ರೋಫಿಯನ್ನು ಎತ್ತಿ ಹಿಡಿದಾಗ ಅವರ ತವರು ಅಭಿಮಾನಿಗಳಿಗಿಂತಲೂ ಹೆಚ್ಚಾಗಿ ಸಂಭ್ರಮಿಸಿದ್ದು ನಮ್ಮ ಆಂಧ್ರಪ್ರದೇಶದ ಅನಂತಪುರ ಶಾಲೆಯ ಮಕ್ಕಳು. ತಮ್ಮ ಪಾಲಿನ ದೇವರಾಗಿ ಬದುಕಿಗೆ ಒಂದು ರೂಪು ಕೊಡುತ್ತಿರುವ ವ್ಯಕ್ತಿಗೆ ಸಿಕ್ಕ ಯಶಸ್ಸಿನಿಂದ ಅನಂತಪುರದ ಆ ಶಾಲೆಯ ವಿದ್ಯಾರ್ಥಿವೃಂದ ಹಿರಿಹಿರಿ ಹಿಗ್ಗಿತ್ತು.

ಟೆನಿಸ್ ಅಂಗಳದ ಒಳಗೂ ಹೊರಗೂ ಬಹುದೊಡ್ಡ ತಾರೆಯಾಗಿ ಮೆರೆದವರು ರಫಾ. ಹೌದು, ಜಗತ್ತಿನಾದ್ಯಂತ ಅಭಿಮಾನಿಗಳ ದೊಡ್ಡ ಪಡೆಯನ್ನೇ ಹೊಂದಿರುವ ಈ ಆಟಗಾರ, ತಮ್ಮ ಫ್ಯಾನ್ ಕ್ಲಬ್ ಪಾಲಿಗೆ ನೆಚ್ಚಿನ 'ರಫಾ'. ತಮ್ಮ 'ಶಕ್ತಿ'ಯನ್ನು ಅವರು ರಾಕೆಟ್ ಹಿಡಿದು ಆಡಲಿಳಿದಾಗ ಮಾತ್ರ ಪ್ರಯೋಗಿಸಲಿಲ್ಲ. ಹೆಸರಿಗೆ ಅಂಟಿದ ಖ್ಯಾತಿಯ 'ಬಲ'ವನ್ನು ಸಮಾಜದ ಒಳಿತಿಗೂ ವಿನಿಯೋಗ ಮಾಡಿದರು. ರಫಾ ಅವರ ಸಾಮಾಜಿಕ ಕಳಕಳಿಯ ಪ್ರತಿಫಲವೇ ಅನಂತಪುರದಲ್ಲಿ ತಲೆ ಎತ್ತಿರುವ 'ನಡಾಲ್ ಎಜ್ಯುಕೇಶನಲ್ ಟೆನಿಸ್ ಸ್ಕೂಲ್' (ನೆಟ್ಸ್). ಸಮಾಜದ ತೀರಾ ಹಿಂದುಳಿದ ವರ್ಗಗಳ ಪ್ರತಿಭೆಗಳಿಗೆ ನೈಯಾಪೈಸೆ ಖರ್ಚಿಲ್ಲದೆ ಓದುತ್ತಲೇ ಟೆನಿಸ್ ಕಲಿಕೆಗೂ ನೆಟ್ಸ್‌ನಲ್ಲಿ ಅವಕಾಶ ಕಲ್ಪಿಸಿದ್ದಾರೆ ರಫಾ. ಈ ದೃಷ್ಟಿಯಲ್ಲೂ ಅವರು ಗ್ರೇಟ್!

ಕ್ರೀಡೆಗೆ ಉತ್ತೇಜನ ನೀಡಲು ರಫೆಲ್ ನಡಾಲ್ ಫೌಂಡೇಷನ್ ಸ್ಥಾಪಿಸಿರುವ ಅವರು, ಸ್ಪೇನ್ ಮಾತ್ರವಲ್ಲದೆ, ಭಾರತ ಮತ್ತು ಅಮೆರಿಕದಲ್ಲೂ ಫೌಂಡೇಷನ್ ಮೂಲಕ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಸಮಾಜದ ಸ್ವಾಸ್ಥ್ಯಕ್ಕಾಗಿ ಹಂಬಲಿಸುವ ಅವರು, ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಸದ್ದಿಲ್ಲದೆ ನೆರವಿನ ಹಸ್ತ ಚಾಚಿದ್ದಾರೆ. ಕಾರ್ಪೊರೇಟ್‌ಗಳಿಂದ, ಅಭಿಮಾನಿಗಳಿಂದ ದೇಣಿಗೆ ಸಂಗ್ರಹಿಸುವ ಅವರು, ಸಂಗ್ರಹವಾದ ಪ್ರತೀ ಪೈಸೆ ಹೇಗೆ ಖರ್ಚಾಗುತ್ತಿದೆ ಎನ್ನುವ ವಿವರವನ್ನು ಫೌಂಡೇಷನ್‌ನ ವೆಬ್‌ಸೈಟ್‌ನಲ್ಲಿ ಹಾಕುತ್ತಾರೆ. ಸಾಮಾಜಿಕ ಕಾರ್ಯಗಳಿಗಾಗಿ, ಬಡವರ ನೆರವಿಗಾಗಿ ತಮ್ಮ ದುಡಿಮೆಯ ದೊಡ್ಡ ಪಾಲನ್ನೂ ಅವರು ವ್ಯಯಿಸುತ್ತಾರೆ. ದೇಶದ ಅಭಿಮಾನಿಗಳಿಂದಲೇ ಬೆಳೆದು ದೊಡ್ಡವರಾಗಿ, ನೂರಾರು ಕೋಟಿ ರೂಪಾಯಿ ಗಳಿಸುತ್ತಿರುವ, ತೆರಿಗೆಯನ್ನೂ ವಂಚಿಸುತ್ತಿರುವ ಭಾರತದ ಎಷ್ಟೋ ಕ್ರೀಡಾಪಟುಗಳು ಇವರಿಂದ ಕಲಿಯುವುದು ಬೆಟ್ಟದಷ್ಟಿದೆ.

ಆಸ್ಟ್ರೇಲಿಯನ್ ಓಪನ್ ಕಿರೀಟವನ್ನು ಮತ್ತೆ ತೊಡುವ ಮೂಲಕ ಗ್ರ್ಯಾನ್ ಸ್ಲಾಮ್ ಟ್ರೋಫಿಗಳ ಗಳಿಕೆಯಲ್ಲಿ ರೋಜರ್ ಫೆಡರರ್, ನೊವಾಕ್ ಜೊಕೊವಿಕ್ ಅವರನ್ನು ಹಿಂದಿಕ್ಕಿದ ರಫಾ, ಟೆನಿಸ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರು. ಸ್ಪೇನ್‌ನ ಮಲೋರ್ಕಾ ದ್ವೀಪದ ಟೆನಿಸ್ ಅಂಗಳದಲ್ಲಿ ಆಡಿ ಬೆಳೆದ ರಫಾ, ಕೈಯಲ್ಲಿ ಮೊದಲ ಬಾರಿಗೆ ರಾಕೆಟ್ ಹಿಡಿದಾಗ ಅವರಿಗೆ ಕೇವಲ ಮೂರರ ಹರೆಯ. ಚಿಕ್ಕಪ್ಪ ಟೋನಿ ನಡಾಲ್, ಅವರ ಮೊದಲು ಗುರು. 'ನನ್ನ ಮೊದಲ ಎಸೆತಕ್ಕೆ ರಫಾ ಪ್ರತಿಕ್ರಿಯಿಸಿದ ರೀತಿಯೇ ಸಾಕು, ಇವನೊಬ್ಬ ಭಿನ್ನ ಆಟಗಾರನಾಗಿ ಜಗತ್ತಿನ ಗಮನ ಸೆಳೆಯುತ್ತಾನೆ ಎನ್ನುವುದನ್ನು ಅದು ಖಾತ್ರಿಮಾಡಿತ್ತು' ಎಂದು ಟೋನಿ ಹೇಳಿದ್ದುಂಟು.

'ಮಣ್ಣಿನ ಅಂಗಳದ ಈ ರಾಜ'ನ ಬಲಶಾಲಿ ಟಾಪ್‌ಸ್ಪಿನ್ ಹೊಡೆತಗಳು ಎದುರಾಳಿಗಳನ್ನು ಕಂಗೆಡಿಸಿ, ನೇರವಾಗಿ ಈ 'ರಾಜ'ನಿಗೆ ಜಯ ತಂದು ಕೊಡಬಲ್ಲಂಥವು. ಮಣ್ಣಿನ ಅಂಗಳದಲ್ಲಿ ನಡೆಯುವ ಫ್ರೆಂಚ್ ಓಪನ್‌ನಲ್ಲಿ ರಫಾ 13 ಬಾರಿ ಚಾಂಪಿಯನ್ ಆಗಿದ್ದಾರೆ. ಹಾಗೆಂದು ಅವರು ಮಣ್ಣಿನ ಅಂಕಣದ ಸಾಮ್ರಾಟ ಮಾತ್ರವಲ್ಲ, ಅವರೊಬ್ಬ ಆಲ್ ಕೋರ್ಟ್ ಚಾಂಪಿಯನ್ ಕೂಡ ಹೌದು. ತಮ್ಮ ಹದಿನೈದನೇ ವಯಸ್ಸಿನಲ್ಲಿ ವೃತ್ತಿಪರ ಟೆನಿಸ್‌ನಲ್ಲಿ ತೊಡಗಿಸಿಕೊಂಡ ಅವರು, ಮರುವರ್ಷವೇ ಎರಡನೇ ಶ್ರೇಯಾಂಕದ ಆಟಗಾರನಾಗಿ ಹೊರಹೊಮ್ಮಿದ್ದರು. ಫೆಡರರ್, ಜೊಕೊವಿಕ್, ನಡಾಲ್ ಅವರನ್ನೊಳಗೊಂಡ 'ಬಿಗ್ ಥ್ರೀ' ಕ್ಲಬ್‌ನಲ್ಲಿ ಏಕೈಕ ಎಡಗೈ ಆಟಗಾರ ಈ ರಫಾ.

ಬಹುಕಾಲ ಮೊದಲ ಶ್ರೇಯಾಂಕದಲ್ಲಿದ್ದ ಫೆಡರರ್‌ಗೆ ವಿಂಬಲ್ಡನ್ ಫೈನಲ್‌ನಲ್ಲಿ ಸೋಲುಣಿಸುವ ಮೂಲಕ ಮೊದಲ ಶ್ರೇಯಾಂಕಕ್ಕೆ ನೆಗೆದಿದ್ದರು. ಬೀಜಿಂಗ್ ಒಲಿಂಪಿಕ್ ಕೂಟದಲ್ಲಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದ ರಫಾ, ಟೆನಿಸ್‌ನ ಎಲ್ಲ ಹಿರಿದಾದ ಪ್ರಶಸ್ತಿಗಳನ್ನೂ (ನಾಲ್ಕೂ ಗ್ರ್ಯಾನ್ ಸ್ಲಾಮ್ ಮತ್ತು ಒಲಿಂಪಿಕ್ ಪದಕ) ಗೆದ್ದ ಶ್ರೇಯ ಹೊಂದಿದ್ದಾರೆ. ಈ ರೀತಿಯ ಸಾಧನೆಗೈದ ಮತ್ತೊಬ್ಬ ಆಟಗಾರನೆಂದರೆ ಅಮೆರಿಕದ ಆ್ಯಂಡ್ರೆ ಅಗಾಸ್ಸಿ ಮಾತ್ರ. ಇದೇ ಅಗಾಸ್ಸಿ, ರಫಾ ಅವರನ್ನು ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂದು ಕೊಂಡಾಡಿದ್ದಾರೆ. ಫೆಡರರ್, ಜೊಕೊವಿಕ್, ಮರ್ರೆ ಅವರಂತಹ ಘಟಾನುಘಟಿ ಆಟಗಾರರ ಎದುರಿದ್ದ ಕಠಿಣ ಸವಾಲಿನಲ್ಲಿ ರಫಾ ಮಾಡಿರುವ ಸಾಧನೆಗೆ ವಿಶೇಷ ಮಹತ್ವವಿದೆ ಎಂದು ಅವರು ಹೇಳಿರುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

ಪರಿಸರ ಸಂರಕ್ಷಣೆಯ ರಾಯಭಾರಿಯಾಗಿಯೂ ಕೆಲಸ ಮಾಡಿರುವ ರಫಾ, ಸಸಿ ನೆಡುವ ಬಹುದೊಡ್ಡ ಆಂದೋಲನ ನಡೆಸಿದವರು. ತಮ್ಮ ಮಲೋರ್ಕಾ ದ್ವೀಪ ಮಹಾಪೂರದಿಂದ ತತ್ತರಿಸಿದಾಗ ಜನರೊಂದಿಗೆ ನಿಂತು ಅವರ ಕಣ್ಣೀರು ಒರೆಸಿದವರು. ಮಹಾಪೂರ ಬಂದಾಗ ಗಾಯದ ಕಾರಣದಿಂದ ಯುಎಸ್ ಓಪನ್‌ನಿಂದ ಹೊರಗುಳಿದಿದ್ದ ಅವರು, ಸಂತ್ರಸ್ತರ ಪುನರ್ವಸತಿಗಾಗಿ ಗೆಳೆಯರೊಂದಿಗೆ ಕೆಲಸ ಮಾಡಿದವರು. ಸಂತ್ರಸ್ತರಿಗೆ ಹತ್ತು ಲಕ್ಷ ಪೌಂಡ್‌ನ ನೆರವನ್ನೂ ನೀಡಿದವರು. ಇನ್ನೂ ಹೆಚ್ಚಿನ ನೆರವು ಒದಗಿಸಲು ಸಹಾಯಾರ್ಥ ಟೆನಿಸ್ ಪಂದ್ಯಗಳನ್ನು ಆಡಿದವರು. ಹೌದು, ನಮ್ಮ ಕ್ರೀಡಾತಾರೆಗಳು ಇವರ ವ್ಯಕ್ತಿತ್ವವನ್ನೊಮ್ಮೆ ಕಣ್ತೆರೆದು ನೋಡಬೇಕು.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65